‘ನಮಗೆ ಭೂಮಿ-ಕಾಣಿ ಇಲ್ಲ! ಮತ್ತೇನು ಮಾಡು ಅಂತೀರಿ! ನನ್ನ ಹೆಂಡತಿ ಕತ್ತಾಳೆ ನಾರಿನಲ್ಲಿ ಹಗ್ಗ, ಸಿಂಬೆ ಹೊಸೆದು ಮಾರುತ್ತಾಳೆ. ಬರೀ ಇಷ್ಟರಾಗೆ ಹೊಟ್ಟೆ ತುಂಬೋಲ್ಲ ಮೇಡಮ್’ ನೆಲನೋಡುತ್ತಾ ಹೀಗೆ ಹೇಳುವಾಗ ಯಾವ ಭೀತಿಯೂ ಅವನಲ್ಲಿರಲಿಲ್ಲ. ಅವನ ಮಾತುಗಳು ವರ್ತಮಾನಕ್ಕೆ ಎಸೆದ ಪ್ರಶ್ನೆಗಳಂತಿದ್ದವು! ಸಾವಿರ ಸುಳ್ಳು ಹೇಳಿ ಸಿರಿತನದಲ್ಲಿ ಬದುಕುವವರಿಗಿಂತ, ಸತ್ಯ ಹೇಳಿ ಬಡತನದಲ್ಲಿ ಬದುಕುವವರೇ ನಿಜವಾದ ವಿಶ್ವಾಸಕ್ಕೆ ಅರ್ಹರು ಎನಿಸಿತು ನನಗೆ.

‘ನಿಮ್ಮ ಮನೆ ಎಲ್ಲಿದೆ ಜಯರಾಮ?’

‘ನಮಗೆ ಮನೆ ಇಲ್ಲ ಮೇಡಮ್, ನಮ್ಮ ಅಪ್ಪಾವರು ಬದುಕಿದ್ದಾಗ ಇಲ್ಲೇ ಕೆರೆ ಬಯಲಲ್ಲಿ ಇರೋ ಗೋಮಾಳದಲ್ಲಿ ಗುಡಿಸ್ಲು ಹಾಕೊಂಡಿದ್ದರು. ಈ ಊರಿನವರು ನಮ್ಮನ್ನು ಅಲ್ಲಿಂದ ಎತ್ತಂಗಡಿ ಮಾಡಿಸಿದರು. ಈಗ ಇರೋಕೂ ಜಾಗವಿಲ್ದೆ ಬಂಡೆ ಆಂಜನೇಯಸ್ವಾಮಿ ಗುಡಿ ಹತ್ತಿರ ಖರಾಬು ಜಾಗದಲ್ಲಿ ಗುಡಿಸಲು ಹಾಕ್ಕೊಂಡಿದ್ದೀವಿ’ ಎಂದು ಸೋತ ದನಿಯಲ್ಲಿ ಹೇಳಿದ.

‘ಮಕ್ಕಳಿದ್ದಾರಾ?’ ಎಂದು ಕೇಳಿದೆ.

‘ಇಬ್ಬರು ಹೆಣ್ಣುಮಕ್ಕಳಿದ್ದಾರೆ, ಮೊದಲನೆಯವಳು ಸತ್ಯಮ್ಮ ಅಂಬೋ ಏಳು ವರ್ಸದ ಮಗಳು, ಇನ್ನೊಂದು ಕೈಗೂಸು’

‘ಸ್ಕೂಲಿಗೆ ಹೋಗ್ತಿದ್ದಾಳಾ?’

‘ಇಲ್ರಿ. ಅವಳು ಸ್ಕೂಲಿಗೆ ಹೋದ್ರೆ, ಎಳೆಗೂಸು ನೋಡಿಕೊಂಡು ಮನೆಕೆಲಸ ಮಾಡೋರು ಯಾರು?’

ಜಯರಾಮ ಹೀಗೆಯೇ ಮಾತು ಮುಂದುವರೆಸಿದ್ದ. ಅವನ ಮಾತುಗಳನ್ನು ಕೇಳುತ್ತಾ ಕೇಳುತ್ತಾ ನನಗೆ ಅಂದಿನ ದೊಡ್ಡಹನುಮನ ಸ್ಥಿತಿ ಮತ್ತೆ ಮತ್ತೆ ಕಣ್ಣಮುಂದೆ ಬರತೊಡಗಿತು. ಓದು ಮತ್ತು ಆಟದಲ್ಲಿ ಪ್ರತಿಭಾವಂತನಾಗಿದ್ದ ಜಯರಾಮನನ್ನು ಗುರ್ತಿಸಿ, ಮುಂದಿನ ಅವಕಾಶಗಳಿಗೆ ದಾರಿ ಕಾಣಿಸುವ ಚೈತನ್ಯ ಅವನು ಹುಟ್ಟಿ ಬೆಳೆದ ಪರಿಸರಕ್ಕಿರಲಿಲ್ಲ! ಅವನು ಇಲ್ಲಿಯೇ ಉಳಿದುಬಿಟ್ಟ! ಅವನ ಇಂದಿನ ದಾರುಣ ಸ್ಥಿತಿಗೆ ಈ ಸಮಾಜವೂ ಕಾರಣ. ಇಷ್ಟರ ನಡುವೆಯೂ ನಾನು ಯಾರು ಎಂದು ಅವನಿಗೆ ಹೇಳಿಕೊಳ್ಳಲಿಲ್ಲ.

‘ಜಯರಾಮ, ನಿನಗೆ ಯಾವುದಾದರೂ ಕೆಲಸ ಕೊಡಿಸಿದರೆ ಮಾಡ್ತೀಯಾ?’

‘ನೀವು ತೋರ್‍ಸಿದ ಕೆಲಸಾನಾ ತಲೆಮೇಲೆ ಹೊತ್ತು ಮಾಡ್ತೀನಿ’ ಎಂದ. ಅವನ ಮಾತುಗಳು ‘ನೋಯುತ್ತಿರುವ ನನ್ನ ಕುಟುಂಬದ ನೋವನ್ನು ಅರ್ಥಮಾಡಿಕೊಂಡವರು ನೀವು’ ಎಂದು ಹೇಳುವಂತಿದ್ದವು.

‘ಸರಿ ನೀನಿನ್ನು ಹೋಗು. ಕಳ್ಳತನ ಮಾಡಿ ಬಡತನಕ್ಕಿರುವ ಸ್ವಾಭಿಮಾನವನ್ನು ಕಳೆಯುವ ಕೆಲಸ ಮಾಡಬೇಡ. ನಾಳೆ ನಿನ್ನ ಮಗಳು ಸತ್ಯಳನ್ನು ನನ್ನಲ್ಲಿಗೆ ಕರೆದುಕೊಂಡು ಬಾ’ ಎಂದು ಹೇಳಿ ‘ಇವನನ್ನು ಮನೆಗೆ ಕಳುಹಿಸಿ’ ಎಂದು ನೇಮಯ್ಯ ಮತ್ತು ಕೃಷ್ಣಪ್ಪನವರಿಗೆ ಹೇಳಿದೆ. ‘ಜಯರಾಮನ ಬದುಕು ಗತದ ನೆನಪುಗಳಿಂದ ಬಿಡುಗಡೆ ಪಡೆದು, ಹೊಸ ಜೀವನಕ್ಕೆ ಹೊರಳಲಿ’ ಎಂದು ನನ್ನೊಳಗೇ ಹಾರೈಸಿಕೊಂಡೆ.

ಆಸರೆಯ ನೆರಳೇ ಇಲ್ಲದ ಒಂದು ನತದೃಷ್ಟ ಕುಟುಂಬದ ನೆಮ್ಮದಿಯ ಬದುಕಿಗಾಗಿ ಶಕ್ತಿ ಮೀರಿ ಶ್ರಮಿಸಬೇಕು ಎಂದು ತೀರ್ಮಾನಿಸಿಕೊಂಡೆ. ನನ್ನ ಚೈತನ್ಯವೆಲ್ಲಾ ಒಮ್ಮೆಲೆ ಉಕ್ಕತೊಡಗಿತು. ಅಂದು ರಾತ್ರಿ ಜಯರಾಮನ ಕುಟುಂಬದ ಸ್ಥಿತಿಯನ್ನು ಕಣ್ಣಮುಂದೆ ತಂದುಕೊಂಡು, ಭವಿಷ್ಯದ ಹತ್ತಾರು ಸಾಧ್ಯತೆಗಳಿಂದ ಚಿಂತಿಸಿದೆ. ಎಷ್ಟುಹೊತ್ತಾದರೂ ನಿದ್ದೆ ಬರಲಿಲ್ಲ. ಕಂಪಳರಂಗನ ಜಾತ್ರೆಯಲ್ಲಿ ನನ್ನ ಎದೆಗೆ ಆತುಕೊಂಡಿದ್ದ ಕೂಸನ್ನು ಸರಕ್ಕನೆ ಕಸಿದುಕೊಂಡ ಆ ತಾಯಿಯ ಮುಖದ ಕಾತುರ ನನ್ನ ಕಣ್ಣು ಮುಂದೆ ಬಂದು ನಿಂತಿತು. ಅವಳ ಕೈಗಳಲ್ಲಿದ್ದ ಗಡಸು, ಕಣ್ಣುಗಳಲ್ಲಿದ್ದ ಅವ್ಯಕ್ತ ಸಂತೋಷ, ಎಲ್ಲವೂ ನನ್ನನ್ನು ಕಲಕತೊಡಗಿತು, ಮನಸ್ಸು ಹೊಯ್ದಾಡತೊಡಗಿತು. ಮತ್ತೆ ಅದೇ ಚಿತ್ರ, ಅದೇ ಹೊಯ್ದಾಟ. ಕಣ್ಣುಮುಚ್ಚಲಾಗಲಿಲ್ಲ. ಕೊನೆಗೆ ಒಂದು ನಿರ್ಧಾರಕ್ಕೆ ಬಂದೆ.

‘ಇದಕ್ಕಿಂತ ಒಳ್ಳೆಯ ಕೆಲಸ ಇನ್ನಾವುದಿದೆ! ನನಗಂತೂ ಯಾರೂ ಇಲ್ಲ! ಸತ್ಯಳನ್ನೇ ನನ್ನ ಮಗಳು ಎಂದು ತಿಳಿದುಕೊಂಡು ಸಾಕಬೇಕು. ಅವಳ ಅಮ್ಮನಂತೆಯೇ ಚನ್ನಾಗಿ ನೋಡಿಕೊಳ್ಳುತ್ತೇನೆ. ಅವಳನ್ನು ಮನೆಗೆ ಕರೆದುಕೊಂಡು ಬರುತ್ತೇನೆ. ನಾಳೆಯಿಂದ ಸತ್ಯ ನನ್ನ ಮಗಳು’ ನಾನು ಮತ್ತೊಂದು ಮಗ್ಗುಲಿಗೆ ಸಂತಸದಿಂದ ಹೊರಳಿದೆ. ಹೊರಗೆ ಹಕ್ಕಿಗಳ ಚಿಲಿಪಿಲಿ ಕೇಳಿಸುತ್ತಿತ್ತು. ನನ್ನ ಕಣ್ಣುಗಳು ನಿಧಾನವಾಗಿ ನಿದ್ದೆಗೆ ವಶವಾದವು. ●